**All India Radio: Bangalore**
**National Bulletins In Kannada**
**08.07.2025 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**08.07.2025 / 19.35 hrs**

**<><*<><>*><>**

<u>ಮುಖ್ಯಾಂಶಗಳು</u>

೧. ಬ್ರೆಸಿಲಿಯಾದಲ್ಲಿಂದು ಪ್ರಧಾನಿ ನರೇಂದ್ರ ಮೋದಿ, ಬ್ರೆಜಿಲ್ ಅಧ್ಯಕ್ಷ ಲುಲಾ ಡಾ ಸಿಲ್ವಾ ನಿಯೋಗಮಟ್ಟದ ಮಾತುಕತೆ; ಪರಸ್ಪರ ಹಿತಾಸಕ್ತಿ ವಿಚಾರ ವಿನಿಮಯ ನಿರೀಕ್ಷೆ

೨. ಪ್ರಧಾನಮಂತ್ರಿ ಜನ್‌ಧನ್ ನಿಷ್ಕ್ರಿಯ ಖಾತೆಗಳನ್ನು ಮುಚ್ಚುವಂತೆ ಬ್ಯಾಂಕ್‌ಗಳಿಗೆ ಯಾವುದೇ ನಿರ್ದೇಶನ ನೀಡಿಲ್ಲ - ಹಣಕಾಸು ಸಚಿವಾಲಯ ಸ್ಪಷ್ಟನೆ

೩. ೨೦೨೬ನೇ ಸಾಲಿನ ಹಜ್ ಯಾತ್ರೆಗೆ ಇಂದಿನಿಂದ ಅರ್ಜಿ ಸ್ವೀಕಾರ; ಸುಗಮ ಅರ್ಜಿ ಸಲ್ಲಿಕೆಗೆ ’ಹಜ್ ಸುವಿಧಾ’ ಮೊಬೈಲ್ ಆಪ್

೪. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದಿಂದು ನೂತನ ಕಲಾ ಸೇತು ಭಾಷಾ ತಂತ್ರಜ್ಞಾನ ಬಿಡುಗಡೆ

**<><*<><>*><>**

ಐದು ರಾಷ್ಟ್ರಗಳ ಪ್ರವಾಸದ ಭಾಗವಾಗಿ ಬ್ರೆಜಿಲ್ ರಾಜಧಾನಿ ಬ್ರೆಸಿಲಿಯಾಗೆ ತಲುಪಿರುವ ಪ್ರಧಾನಿ ನರೇಂದ್ರ ಮೋದಿ, ಅವರಿಗೆ ಇಂದು ಮಿಲಿಟರಿ ಗೌರವದೊಂದಿಗೆ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಈ ವೇಳೆ ಬ್ರೆಜಿಲ್ ಅಧ್ಯಕ್ಷ ಲುಲಾ ಡಾ ಸಿಲ್ವಾ ಹಾಗೂ ಅವರ ಪತ್ನಿ ಉಪಸ್ಥಿತರಿದ್ದರು. ತಮ್ಮ ಪ್ರವಾಸದ ಭಾಗವಾಗಿ ಪ್ರಧಾನಿ, ಬ್ರೆಜಿಲ್ ಅಧ್ಯಕ್ಷ ಲುಲಾ ಡಾ ಸಿಲ್ವಾ ಅವರೊಂದಿಗೆ ಉಭಯ ರಾಷ್ಟ್ರಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆ ಬಲಪಡಿಸುವ ಹಾಗೂ ಪರಸ್ಪರ ಹಿತಾಸಕ್ತಿಯ ಪ್ರಮುಖ ವಿಷಯಗಳ ಕುರಿತು ಮಾತುಕತೆ ನಡೆಸಲಿದ್ದಾರೆ. ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರ ಗೌರವಾರ್ಥ ಬ್ರೆಜಿಲ್ ಅಧ್ಯಕ್ಷರು ಔತಣಕೂಟ ಏರ್ಪಡಿಸಲಿದ್ದಾರೆ. ಪ್ರಧಾನಿಯವರ ಬ್ರೆಜಿಲ್ ಪ್ರವಾಸದ ಕುರಿತು ಬ್ರಿಜಿಲಿಯಾದಲ್ಲಿರುವ ನಮ್ಮ ಬಾತ್ಮೀದಾರರು ಹೆಚ್ಚಿನ ಮಾಹಿತಿ

ಧ್ವನಿ. ಎಚ್.ಆರ್.ಸುಧೀಂದ್ರ ( ೫೨ ಸೆಕೆಂಡ್ಸ್)

**<><*<><>*><>**

ಪಂಚ ರಾಷ್ಟ್ರಗಳ ಪ್ರವಾಸದ ತಮ್ಮ ಕೊನೆಯ ಚರಣದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು, ನಾಳೆ ನಮಿಬಿಯಾ ಅಧ್ಯಕ್ಷೆ ನೆಟುಂಬೊ ನಾಂಡಿ ಎನ್‌ಧೈತ್ವಾ ಅವರ ಆಹ್ವಾನದ ಮೇರಿಗೆ ನಮಿಬಿಯಾದ ವಿಂಡ್‌ಹೋಕ್‌ಗೆ ತೆರಳಲಿದ್ದಾರೆ. ಇದು ಪ್ರಧಾನಿ ನರೇಂದ್ರ ಮೋದಿಯವರ ನಮಿಬಿಯಾಕ್ಕೆ ನೀಡುತ್ತಿರುವ ಮೊದಲ ಭೇಟಿಯಾಗಿದೆ. ಭಾರತೀಯ ಪ್ರಧಾನಮಂತ್ರಿಯೊಬ್ಬರು ೨೭ ವರ್ಷಗಳ ನಂತರ ಕೈಗೊಳ್ಳುತ್ತಿರುವ ಹಾಗೂ ಒಟ್ಟಾರೆ ಮೂರನೇ ಭೇಟಿ ಇದಾಗಿದೆ. ತಮ್ಮ ಭೇಟಿಯ ವೇಳೆ ಪ್ರಧಾನಿ, ನಮಿಬಿಯಾ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದು, ನಿಯೋಗ ಮಟ್ಟದ ಮಾತುಕತೆಗಳೂ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ನಮಿಬಿಯಾ ಸಂಸತನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಪ್ರಧಾನಿ, ಸಂಸ್ಥಾಪಕ ರಾಷ್ಟ್ರಪಿತ ಹಾಗೂ ನಮಿಬಿಯಾದ ಪ್ರಥಮ ಅಧ್ಯಕ್ಷ ಡಾ.ಸ್ಯಾಮ್ ನುಜೊಮಾ ಅವರಿಗೆ ಗೌರವ ನಮನ ಸಲ್ಲಿಸಲಿದ್ದಾರೆ. ಪ್ರಧಾನಿಯವರ ನಮಿಬಿಯಾ ಪ್ರವಾಸದ ಕುರಿತು ಮಾಹಿತಿ ನೀಡಿರುವ ನಮಿಬಿಯಾದ ಭಾರತೀಯ ರಾಯಭಾರಿ ರಾಹುಲ್

ಶ್ರೀವಾಸ್ತವ್, ನಮಿಬಿಯಾ ಒಂದು ಸಂಪನ್ಮೂಲಭರಿತ ರಾಷ್ಟ್ರವಾಗಿದ್ದು, ತೈಲ ಮತ್ತು ಅನಿಲ, ಹೈಡ್ರೋ ಕಾರ್ಬನ್, ನಿರ್ಣಾಯಕ ಖನಿಜಗಳು ಸೇರಿದಂತೆ ವಿವಿಧ ಹೊಸ ಕ್ಷೇತ್ರಗಳಲ್ಲಿ ಆರ್ಥಿಕ ಪಾಲುದಾರಿಕೆಯನ್ನು ಅನ್ವೇಷಿಸುವುದರ ಮೇಲೆ ಪ್ರಧಾನಿಯವರ ಈ ಭೇಟಿ ಕೇಂದ್ರೀಕರಿಸಲಿದೆ.ಭಾರತದ ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ ಕೂಡ ಮಾತುಕತೆಯ ಪ್ರಮುಖ ಅಂಶವಾಗಿದೆ ಎಂದು ಮಾಹಿತಿ ನೀಡಿದ್ದಾರೆ.

<><*<><>*><>

ಪ್ರಧಾನಮಂತ್ರಿ ಜನ್‌ಧನ್ ಯೋಜನೆಯ ನಿಷ್ಕ್ರಿಯ ಖಾತೆಗಳನ್ನು ಮುಚ್ಚುವಂತೆ ಬ್ಯಾಂಕ್‌ಗಳಿಗೆ ಯಾವುದೇ ನಿರ್ದೇಶನ ನೀಡಿಲ್ಲ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ. ಪ್ರಧಾನಮಂತ್ರಿ ಜನ್‌ಧನ್ ಯೋಜನೆಯ ಭಾಗವಾಗಿ ತೆರೆದಿರುವ ಜನ್‌ಧನ್ ಖಾತೆಗಳು ನಿಷ್ಕ್ರಿಯಗೊಂಡ ಬಳಿಕ ಅವುಗಳನ್ನು ಬ್ಯಾಂಕ್‌ಗಳು ಮುಚ್ಚುವಂತೆ ಹಣಕಾಸು ಸೇವೆಗಳ ಇಲಾಖೆ ನಿರ್ದೇಶನ ನೀಡಿದೆ ಎಂಬ ಮಾಧ್ಯಮ ವರದಿಗಳ ಬೆನ್ನಲ್ಲೇ ಇಂದು ಹಣಕಾಸು ಸಚಿವಾಲಯ ಈ ಸ್ಪಷ್ಟನೆ ನೀಡಿದೆ. ನಿಷ್ಕ್ರಿಯ ಜನ್‌ಧನ್ ಖಾತೆಗಳ ಸಂಖ್ಯೆಯನ್ನು ಇಲಾಖೆ ನಿಯಮಿತವಾಗಿ ಗಮನಿಸುತ್ತಿದ್ದು, ಖಾತೆದಾರರನ್ನು ಸಂಪರ್ಕಿಸಿ ನಿಷ್ಕ್ರಿಯ ಖಾತೆಗಳನ್ನು ಪುನಃ ಸಕ್ರಿಯಗೊಳಿಸುವಂತೆ ಬ್ಯಾಂಕ್‌ಗಳಿಗೆ ಸಲಹೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

<><*<><>*><>

ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಮತ್ತು ದೇಶದ ರಾಷ್ಟ್ರೀಯ ಹೆದ್ದಾರಿಗಳನ್ನು ಪರಿಸರ ಸ್ನೇಹಿಗೊಳಿಸಲು ಕೇಂದ್ರ ಸರ್ಕಾರ ಹಲವಾರು ಕ್ರಮ ಕೈಗೊಳ್ಳುತ್ತಿದೆ ಎಂದು ಕೇಂದ್ರ ರಸ್ತೆ, ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ದೆಹಲಿಯ ಫರೀದಾಬಾದ್-ನೊಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕಾರಿಡಾರ್ ಬಳಿ 'ಏಕ್‌ಪೇಡ್ ಮಾ ಕೆ ನಾಮ್ ೨.೦' ಸಸಿ ನೆಡುವ ಅಭಿಯಾನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಸಚಿವರು, ಈವರೆಗೆ ದೇಶಾದ್ಯಂತ ಸುಮಾರು ೪.೭೮ ಕೋಟಿ ಸಸಿಗಳನ್ನು ನೆಡಲಾಗಿದ್ದು, ೭೦  ಮರಗಳನ್ನು ಸ್ಥಳಾಂತರಿಸಲಾಗಿದೆ. ೨೦೨೪-೨೫ ಸಾಲಿನಲ್ಲಿ ೬೦ ಲಕ್ಷ ಗಿಡ ನೆಡುವ ಗುರಿಯನ್ನು ಹೊಂದಲಾಗಿತ್ತು. ಆದರೆ ಆ ಗುರಿಯನ್ನು ಮೀರಿ ೬೭ ಲಕ್ಷ ಸಸಿಗಳನ್ನು ನೆಟ್ಟು, ೧೧೨ ಪ್ರತಿಶತದಷ್ಟು ಗುರಿ ಸಾಧಿಸಲಾಗಿದೆ ಎಂದು ತಿಳಿಸಿದರು.

<><*<><>*><>

೨೦೨೬ನೇ ಸಾಲಿನ ಹಜ್ ಯಾತ್ರೆಗಾಗಿ ಯಾತ್ರಾರ್ಥಿಗಳಿಂದ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಹಜ್ ಸಮಿತಿ ಇಂದಿನಿಂದ ಅಧಿಕೃತ ಚಾಲನೆ ನೀಡಿದೆ. ಯಾತ್ರಾರ್ಥಿಗಳು ಅರ್ಜಿಗಳನ್ನು, ಅಧಿಕೃತ ಹಜ್ ಪೋರ್ಟಲ್ ಅಥವಾ 'ಹಜ್ ಸುವಿಧಾ' ಮೊಬೈಲ್ ಆಪ್ ಮೂಲಕ ಸಲ್ಲಿಸಬಹುದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಈ ತಿಂಗಳ ಕೊನೆಯವರೆಗೆ ಅವಕಾಶವಿದೆ. ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯದ ಪ್ರಕಾರ, ಅರ್ಜಿ ಸಲ್ಲಿಸುವ ಯಾತ್ರಾರ್ಥಿಗಳು, ಅರ್ಜಿ ಸಲ್ಲಿಕೆಯ ಕೊನೆಯ ಅಥವಾ ಅದಕ್ಕೂ ಮುಂಚಿತವಾಗಿ ನೀಡಲಾದ, ಡಿಸೆಂಬರ್ ೨೦೨೬ರವರೆಗೆ ಮಾನ್ಯತೆ ಹೊಂದಿರುವ ಯಂತ್ರ ಸಂವೇದಿ ಪಾಸ್‌ಪೋರ್ಟ್ ಅನ್ನು ಕಡ್ಡಾಯವಾಗಿ ಹೊಂದಿರಬೇಕು. ಅರ್ಜಿ ಸಲ್ಲಿಸುವ ವೇಳೆ, ಯಾತ್ರಾರ್ಥಿಗಳು ಎಚ್ಚರಿಕೆ ವಹಿಸುವಂತೆ ಸೂಚಿಸಿರುವ ಸಚಿವಾಲಯ, ಒಂದು ಬಾರಿ ಅರ್ಜಿಗಳನ್ನು ಸಲ್ಲಿಸಿದ ಬಳಿಕ, ಮರಣ ಅಥವಾ ಮತ್ತಿತರ ಗಂಭೀರ ವೈದ್ಯಕೀಯ ತುರ್ತು ಪರಿಸ್ಥಿತಿಗಳ ಸಂದರ್ಭಗಳಲ್ಲಿ ಮಾತ್ರ ಆ ಅರ್ಜಿಗಳನ್ನು ರದ್ದುಪಡಿಸಲು ಸಾಧ್ಯ. ಇಲ್ಲವಾದಲ್ಲಿ ಯಾತ್ರಾರ್ಥಿಗಳು ದಂಡ ತೆರಬೇಕಾಗುತ್ತದೆ ಎಂದು ಸ್ಪಷ್ಟಪಡಿಸಿದೆ.

<><*<><>*><>

ಭಾರತ್ ಚಾಲೆಂಜ್‌ಗಾಗಿ ವೇವ್ ಎಕ್ಸ್‌ನ ಸ್ಟಾರ್ಟ್‌ಅಪ್ ಎಗ್ಸಲರೇಟರ್ ವೇದಿಕೆಯ ಮೂಲಕ ಕಲಾ ಸೇತುವೆ ಎಂಬ ನೈಜ ಕಾಲದ ಭಾಷ ತಂತ್ರಜ್ಞಾನವನ್ನು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಇಂದು ಬಿಡುಗಡೆ ಮಾಡಿದೆ.  ಈ ಉಪಕ್ರಮದ ಮೂಲಕ ದೇಶದ ವಿವಿಧ ನವೋದ್ಯಮಗಳನ್ನು

ಸಂದೇಶದಿಂದ ವೀಡಿಯೋ ಸೃಜನೆ, ಸಂದೇಶದಿಂದ ಗ್ರಾಫಿಕ್ಸ್ ಸೃಜನೆ ಮತ್ತು ಸಂದೇಶದಿಂದ ಧ್ವನಿ ಸೃಜನೆ ಸೇರಿದಂತೆ ಮೂರು ಪ್ರಮುಖ ಕ್ಷೇತ್ರಗಳಲ್ಲಿ ಎಐ ಚಾಲಿತ ವಿಷಯ ಸೃಜನೆಗೆ ಆಹ್ವಾನಿಸಲಾಗಿದೆ.

**<><*<><>*><>**

ಶಿಶುಗಳಿಗೆ ಮತ್ತು ಮಕ್ಕಳಿಗೆ ಸೂಕ್ತವಾದ ಜಗತ್ತಿನ ಮೊಟ್ಟ ಮೊದಲ ಮಲೇರಿಯಾ ಚಿಕಿತ್ಸೆಗೆ ಅನುಮೋದನೆ ದೊರೆತಿದೆ. ಔಷಧಿ ತಯಾರಿಕಾ ಸಂಸ್ಥೆ-ನೊವಾರ್ಟಿಸ್ ಅಭಿವೃದ್ಧಿಪಡಿಸಿರುವ ಹೊಸ ಮಲೇರಿಯಾ ಔಷಧಿ ಕೊವಾರ್ಟೆಮ್‌ಗೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಅಧಿಕೃತ ಅನುಮೋದನೆ ನೀಡಲಾಗಿದೆ. ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಮಲೇರಿಯಾ ಸಂಬಂಧಿತ ಸಾವುಗಳು ಅತಿ ಹೆಚ್ಚಾಗಿ ಸಂಭವಿಸುವ ಹಿನ್ನೆಲೆ ಈ ಔಷಧಿಯ ಅಭಿವೃದ್ಧಿ ಪ್ರಮುಖ ಸಕಾರಾತ್ಮಕ ಬೆಳವಣಿಗೆಯಾಗಿದೆ. ಇದರ ಬೆನ್ನಲ್ಲೇ ಮುಂದಿನ ಕೆಲವು ವಾರಗಳಲ್ಲಿ ಆಫ್ರಿಕಾದಲ್ಲಿ ಈ ಔಷಧಿಯ ಉತ್ಪಾದನೆ ಮತ್ತು ವಿತರಣೆ ಆರಂಭವಾಗುವ ನಿರೀಕ್ಷೆಯಿದೆ. ಅತಿ ಹೆಚ್ಚು ಮಲೇರಿಯಾ ಸಂಬಂಧಿತ ಸಾವುಗಳು, ಆಫ್ರಿಕಾ ಖಂಡದಲ್ಲಿ ದಾಖಲಾಗಿದೆ. ೨೦೨೩ರಲ್ಲಿ ಮಲೇರಿಯಾ ೫ ಲಕ್ಷಕ್ಕಿಂತಲೂ ಹೆಚ್ಚು ಸಾವುಗಳಿಗೆ ಕಾರಣವಾಗಿತ್ತು. ಈವರೆಗೆ ಶಿಶುಗಳಿಗೆ ಮಲೇರಿಯಾ ಚಿಕಿತ್ಸೆಗಾಗಿ ಇತರ ಮಕ್ಕಳಿಗೆ ನೀಡುತ್ತಿದ್ದ ಪ್ರಾಯೋಗಿಕ ಲಸಿಕೆಯನ್ನು ಹೆಚ್ಚಿನ ಅಪಾಯದ ನಡುವೆ ನೀಡಲಾಗುತ್ತಿತ್ತು. ಈ ಹಿನ್ನೆಲೆ ಹೊಸ ಲಸಿಕೆಯ ಅಭಿವೃದ್ಧಿ, ಮಲೇರಿಯಾ ಪೀಡಿತ ಶಿಶುಗಳಿಗೆ ಹಾಗೂ ಚಿಕ್ಕ ಮಕ್ಕಳಿಗೆ ಆಶಾಕಿರಣವಾಗಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೩೫ <>*><>**